ಗೌರವ ಇಟ್ಟುಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಜನ ನಮ್ಮನ್ನು ತೆಗಳುತ್ತಾ ಇದ್ದಾರೆ. ಚಾಮರಾಜನಗರದಲ್ಲಿಯ ಪುಣಜೂರು ರಸ್ತೆ ತೀರಾ ಹದಗೆಟ್ಟಿದೆ. ಸರ್ಕಾರ ಸ್ಪಷ್ಟ ಭರವಸೆ ಕೊಡಬೇಕು. ಇಲ್ಲದಿದ್ದರೆ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ರವರು ಧರಣಿ ಕೂರಲು ಅಧ್ಯಕ್ಷರ ಪೀಠದ ಬಳಿಗೆ ಆಗಮಿಸಿದರು)

ಉಪಾಧ್ಯಕ್ಷರು: ಅಧಿವೇಶನದ ಕೊನೆಯ ದಿವಸ ನೀವು ಈ ರೀತಿ ಮಾಡಿದರೆ ಹೇಗೆ? ಮೊನ್ನೆಯ ದಿವಸ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡುವಾಗ ಈ ವಿಷಯವನ್ನು ಮಾತನಾಡಿದಿರಿ. 'ನಾನು ಸಂಬಂಧಪಟ್ಟವರಿಗೆ ಹೇಳಿದ್ದೇನೆ ಎಂದು' ಸಂಬಂಧಪಟ್ಟ ಸಚಿವರು ಉತ್ತರ ನೀಡಿದ್ದಾರೆ. ದಯಮಾಡಿ ಧರಣಿ ಕುಳಿತುಕೊಳ್ಳಬೇಡಿ. ತಮ್ಮ ಸ್ಥಾನಕ್ಕೆ ವಾಪಾಸ್ಸು ಹೋಗಿ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಉಪಾಧ್ಯಕ್ಷರೆ, ಇದು ನಾಗಾರ್ಜುನ ಕನ್ಸ್‌ಟ್ರಕ್ಷನ್ಸ್ ಕಾರ್ಪೋರೇಷನ್ನಿಗೆ ಗುತ್ತಿಗೆಗೆ ವಹಿಸಿದೆ. ಆ ಗುತ್ತಿಗೆದಾರರನ್ನು ಕರೆಸಿ ಈಗಾಗಲೇ ಮಾತನಾಡಿದ್ದೇನೆ. ನವೆಂಬರ್ ತಿಂಗಳ ಕೊನೆಯೊಳಗಾಗಿ ಬ್ಯಾಕ್‌ಲಾಗ್ ಇರುವ ಕೆಲಸವನ್ನು ಸಂಪೂರ್ಣವಾಗಿ ಮುಗಿಸುತ್ತೇವೆಂದು ಹೇಳಿದ್ದಾರೆ. ಮಾರ್ಚ್ 1999ರೊಳಗೆ ಆ ಕೆಲಸವನ್ನು ಮುಗಿಸಿಕೊಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಸ್ಪಷ್ಟ ಭರವಸೆ ಕೊಡಬಯಸುತ್ತೇನೆ. ದಯವಿಟ್ಟು ಇದರ ಬಗ್ಗೆ ಯಾವುದೇ ಅನುಮಾನಪಟ್ಟಕೊಳ್ಳಬೇಕಾಗಿಲ್ಲ. ಇದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ತಾವು ಹೇಳಿದ ಪ್ರಕಾರ ಎರಡು ಸಲ ಕರೆದು ಮೀಟಿಂಗ್ ಮಾಡಿ ತೀರ್ಮಾನ ತೆಗೆದುಕೊಂಡಿದ್ದೇವೆ.

(ಈ ಹಂತದಲ್ಲಿ ಶ್ರೀ ವಾಟಾಳ್‌ನಾಗರಾಜ್ ರವರು ಧರಣಿಯನ್ನು ವಾಪಸ್ಸು ತೆಗೆದುಕೊಂಡು ತಮ್ಮ ಸ್ವಸ್ಥಾನಕ್ಕೆ ಹಿಂತಿರುಗಿದರು).

(ಎ) ಫೋರೆಸ್ ಮತ್ತು ಬಿಪಿಎಲ್ ಕಾರ್ಮಿಕರ ಮುಷ್ಕರದ ಬಗ್ಗೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾರ್ಮಿಕ ಮಂತ್ರಿಗಳಾದಂಥ ಸಿದ್ದರಾಮಯ್ಯನವರಿಗೆ ಸಂಬಂಧಪಟ್ಟ ಒಂದು ಪ್ರಶ್ನೆ, ಮತ್ತು ಮಾನ್ಯ ಕೃಷಿ ಸಚಿವರಿಗೆ ಸಂಬಂಧಪಟ್ಟ ಇನ್ನೊಂದು ಪ್ರಶ್ನೆ ಹೀಗೆ ಎರಡು ವಿಷಯಗಳನ್ನು ಒಂದೇ ಸಲಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಪ್ರಜಾಪ್ರಭುತ್ವ ಎನ್ನುವುದಕ್ಕೆ ಏನಾದರೂ ಬೆಲೆ ಇದೆಯೇ ಅಥವಾ ಇಲ್ಲವೇ ಎನ್ನುವುದು ನನ್ನ ಮೊದಲನೇ ಪ್ರಶ್ನೆ. ಏಕೆಂದರೆ ಲಕ್ಷಾಂತರ ಕಾರ್ಮಿಕರು ಬೆಂಗಳೂರು ನಗರದಲ್ಲಿ

ಇದ್ದಾರೆ. ಕಾರ್ಮಿಕರು ತಮ್ಮ ನ್ಯಾಯಯುತವಾದ ಬೇಡಿಕೆಗಳಿಗೆ ಸಂಬಂಧಿಸಿದಂತೆ ಹೋರಾಟ ನಡೆಸಿದರೆ ಕಾರ್ಖಾನೆಯ ಮಾಲೀಕರು ತಕ್ಷಣ 144 ಸೆಕ್ಷನ್ ಹಾಕಿಬಿಡುತ್ತಾರೆ. ಫೊರೆನ್ ಮತ್ತು ಬಿಹೆಚ್ಎಲ್ ನಲ್ಲಿ ಕೆಲಸ ಮಾಡುವ ಸುಮಾರು ಹತ್ತುಸಾವಿರ ಕಾರ್ಮಿಕರು ಮುಷ್ಕರ ಹೂಡುವುದಾಗಿ ನೋಟೀಸ್ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಬಿಹೆಚ್ಎಲ್ ನಿಂದ ಒಟ್ಟು ಹತ್ತು ಯೂನಿಟ್ ಇವೆ, ಈ ಹತ್ತು ಯೂನಿಟ್ ಮುಂದೆ ಯಾರು ಮುಷ್ಕರ ಮಾಡಬಾರದೆಂದು 144 ಸೆಕ್ಷನ್ ಜಾರಿ ಮಾಡಿದ್ದಾರೆ. ಇದರಿಂದಾಗಿ ಕಾರ್ಮಿಕರು ತಮ್ಮ ನ್ಯಾಯಯುತವಾದ ಬೇಡಿಕೆಗಳಿಗೆ ಹೋರಾಟ ಮಾಡದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಅದೇ ರೀತಿಯಲ್ಲಿ ಫೊರೆಸ್ಕಂಪನಿಯವರು 144 ಸೆಕ್ಷನ್ ಜಾರಿ ಮಾಡಿದ್ದಾಗ ಹೈ-ಕೋರ್ಟ್ ಆರ್ಜ್ಞೆ ಮಾಡಿ ಇದನ್ನು ತೆರವು ಮಾಡಿಸಬೇಕಾದ ಪರಿಸ್ಥಿತಿ ಬಂತು. ಕಾರ್ಖಾನೆಯ ಮಾಲೀಕರು ಸರ್ಕಾರದ ಯಾವುದೇ ಕ್ರಮಗಳಿಗೆ ಬೆಲೆ ಕೊಡುತ್ತಿಲ್ಲ. ಲೇಬರ್ ಡಿಪಾರ್ಟ್‌ಮೆಂಟಿನವರು ಕಾರ್ಖಾನೆಯ ಮಾಲೀಕರನ್ನು ಕನ್‌ಸಿಲೀಯೇಷನ್‌ಗೆ ಕರೆದರೆ ಅವರು ಬರುವುದಿಲ್ಲ. ಒಂದು ಪಕ್ಷ ಬಂದರೂ ಕೂಡ ಲೇಬರ್ ಡಿಪಾರ್ಟ್‌ಮೆಂಟ್‌ನವರು ಹೇಳುವ ಯಾವುದೇ ತೀರ್ಮಾನವನ್ನು ಒಪ್ಪುವುದಿಲ್ಲ. ಕಾರ್ಖಾನೆಯ ಮಾಲೀಕರ ಒಂದೇ ಒಂದು ವಾದ ಏನೆಂದರೆ, ಯೂನಿಯನ್ ಪ್ರತಿನಿಧಿಗಳು ಹೊರಗಡೆಯವರು ಇರಬಾರದು ಎಂದು ಹೇಳುತ್ತಿದ್ದಾರೆ. ಮಾನ್ಯ ಸಿದ್ದರಾಮಯ್ಯನವರಿಗೆ ನಾನು ಕೇಳುವುದು ಏನೆಂದರೆ, ನಿಮ್ಮ ಲೇಬರ್ ಕಾನೂನಿನಲ್ಲಿ ಯೂನಿಯನ್ ಪ್ರತಿನಿಧಿಗಳು ಹೊರಗಡೆಯಿಂದ ಅರ್ಧಭಾಗ ಇರಬೇಕು ಎಂದು ಇದೆ. ಹೀಗಿದ್ದರೂ ಕೂಡ ಮೇನೇಜ್‌ಮೆಂಟ್‌ನವರು ಹೊರಗಡೆಯಿಂದ ಯೂನಿಯನ್ ಪ್ರತಿನಿಧಿಗಳು ಬಂದರೆ ನಾವು ನೆಗೋಸಿಯೇಷನ್ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಕಾರ್ಮಿಕರು ಬೇಡಿಕೆಗಳಿಗೆ ಹೊರಾಟ ಆರಂಭಿಸಿದ ತಕ್ಷಣ ಪೋಲೀಸ್‌ನವರು ಮಧ್ಯೆ ಪ್ರವೇಶಿಸುತ್ತಾರೆ. ಈಗಾಗಲೇ ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ವಿಷಯವನ್ನು ಹೇಳಿದ್ದೇನೆ. ಇದರ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಫೊರೆನ್ ಮತ್ತು ಬಿಹೆಚ್ಎಲ್ ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಹೋರಾಟ ಮಾಡತಕ್ಕಂಥ ಸಂದರ್ಭಗಳಲ್ಲಿ ಪೋಲಿಸ್‌ನವರು ಮತ್ತು ಮಾಲೀಕರು ಒಂದಾಗಿ ಕಾರ್ಮಿಕರ ಹಕ್ಕುಗಳನ್ನು ದಮನ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು): ಫೊರೆನ್ ಮತ್ತು ಬಿಹೆಚ್ಎಲ್ ಆ ಭಾಗದಲ್ಲಿ ಸ್ವಲ್ಪ ಗಲಾಟೆಗಳಾಗುತ್ತಿವೆಯೆಂದು ಬೆಂಗಳೂರು ಪೋಲಿಸ್ ಕಮೀಷನರ್‌ರವರು ಅಲ್ಲಿ ಕಾನೂನು ಸುವ್ಯವಸ್ಥೆ ಮಾಡತಕ್ಕಂಥದ್ದು ಅವರ ಜವಾಬ್ದಾರಿ. ತಾವು ಹೇಳಿದ ಮೇಲೆ ನಾವು ಇದರ ಬಗ್ಗೆ ಮಾನ್ಯ ರೇವಣ್ಣಸಿದ್ಧಯ್ಯನವರನ್ನು ಕರೆದು

ಚರ್ಚೆ ಮಾಡಿ ಹಾಕಿರುವ 144 ಸೆಕ್ಷನ್ ವಾಪಸ್ ತೆಗೆದುಕೊಳ್ಳುವುದಕ್ಕೆ ಸೂಚನೆ ನೀಡಿದ್ದೇನೆ. ಬಿ.ಜೆ.ಪಿ.ಎಲ್.ನವರ ಜೊತೆಯಲ್ಲಿ ನಮ್ಮ ಕಾರ್ಮಿಕ ಇಲಾಖೆಯವರು ಮಾತನಾಡುತ್ತಿದ್ದಾರೆ. ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಮಾತುಕತೆಗಳು ಈಗ ಮುಂದುವರೆಯುತ್ತಿವೆ, ಮಾತುಕತೆಯ ಸಂದರ್ಭದಲ್ಲಿ ಬೇಕಾದರೆ ತಮ್ಮನ್ನು ಕರೆದು ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸಿಕೋಳ್ಳೋಣ.

(ಏ) ಕಳಪೆ ಕೀಟ ನಾಶಕ ಹಾಗೂ ಬೀಜಗಳ ಸರಬರಾಜು ಮಾಡಿದವರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಬಹಳ ಪ್ರಾಮುಖ್ಯವಾದ ವಿಚಾರ ಎಂದರೆ, ಈ ಕಳೆಪೆ ಕೀಟನಾಶಕಗಳು ಹಾಗೂ ಕಳಪೆ ಬೀಜಗಳ ಬಗ್ಗೆ ನಾನು ಪ್ರಶ್ನೆ ಕೇಳಿದ್ದಕ್ಕೆ ಇವರು ಲಿಖಿತ ಮೂಲಕವಾಗಿ ಉತ್ತರಿಸಿದ್ದಾರೆ. ಒಂದುಕಡೆ ಮಿಸ್‌ಬ್ರ್ಯಾಂಡೆಡ್ ಫೆಸ್ಟಿಸೈಡ್ ಮತ್ತೊಂದು ಡಿಸ್‌ಬ್ರ್ಯಾಂಡೆಡ್ ಎಂದು ಸಪ್ಲೈ ಮಾಡಿದ್ದಾರೆ. ಮ್ಯಾನುಫ್ಯಾಕ್ಚರ್ಸ್‌ರ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್ ಇಬ್ಬರೂ ಸೇರಿ ಇಡೀ ಕರ್ನಾಟಕ ರಾಜ್ಯದಲ್ಲಿ ಸಪ್ಲೈ ಮಾಡಿದ್ದಾರೆ. ಇದರಿಂದಾಗಿ ಇಡೀ ಕರ್ನಾಟಕ ರೈತಬಾಂಧವರಿಗೆ ತೊಂದರೆಯಾಗಿದೆ ಎನ್ನತಕ್ಕಂಥ ವಿಷಯ ಮಾನ್ಯ ಭೈರೇಗೌಡರಿಗೆ ಗೊತ್ತಿದೆ. ಇದರ ಜೊತೆಗೆ ಅದನ್ನು ಯಾರು ಮ್ಯಾನುಫ್ಯಾಕ್ಚರ್ ಮಾಡುತ್ತಿದ್ದಾರೆಂಬುದೂ ಕೂಡ ಗೊತ್ತಿದೆ. ಇದಕ್ಕೆ ಕ್ರಮ ಏನು ಎಂದರೆ, ಇದಕ್ಕೆ ಸಂಬಂಧಪಟ್ಟಂತೆ ನನ್ನ ಹತ್ತಿರ ಒಂದು ಮಾಹಿತಿ ಇದೆ. ಅದರ ಒಂದು ಉದಾಹರಣೆಯನ್ನು ಇಲ್ಲಿ ಹೇಳಬಯಸುತ್ತೇನೆ. ಕಳಪೆ ಕೀಟನಾಶಕಗಳನ್ನು ಸರಬರಾಜು ಮಾಡಿರುವುದರಲ್ಲಿ ಬಹಳ ಪ್ರಮುಖವಾಗಿ ಆಗ್ರೋ ಕೆಮಿಕಲ್ ಇಂಡಸ್ಟ್ರೀಸ್ ಬೆಂಗಳೂರು ಇವರು ಸರಬರಾಜು ಮಾಡಿದ್ದಾರೆ. ಈ ಸಂಸ್ಥೆಯ ಪಾತ್ರ ಇಲ್ಲಿ ಬಹಳ ಪ್ರಾಮುಖ್ಯವಾಗಿದೆ. ಇದರ ಜೊತೆಗೆ ಬೀದರ್‌ನ ಘಟನೆಗೂ ಇದರ ಕೈವಾಡ ಇದೆ ಎನ್ನುವ ಪ್ರಶ್ನೆ ಇದೆ. ಇವರಿಗೆ ಏನು ಪನಿಷ್‌ಮೆಂಟ್ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ, both manufacturers and dealers fined Rs.250 dealers fined Rs.1500, Rs1000, both manufacturers and dealers fined Rs.100/- each, manufacaturers fined Rs.400 and dealers fined Rs.200/-, ಈ ಕಂಪನಿ ಇಷ್ಟೆಲ್ಲಾ ಅನಾಹುತಗಳನ್ನು ಮಾಡುತ್ತಿದ್ದರೂ ಕೂಡ ಇವರ ಮೇಲೆ ಕೇವಲ 100,250 ರೂಪಾಯಿಗಳ ದಂಡ ಹಾಕಿದರೆ ಹೇಗೆ? ಯಾರು ದಂಡ ಹಾಕಿದ್ದಾರೆ, ಯಾವ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದಾರೆ, ಯಾರು ಇನ್‌ಸ್ಪೆಕ್ಷನ್ ಮಾಡಿದ್ದಾರೆನ್ನುವ ಲಿಸ್ಟ್ ನನ್ನ ಹತ್ತಿರ ಇದೆ. ಇಡೀ ಕರ್ನಾಟಕದ ರೈತರಿಗೆ ತೊಂದರೆ ಕೊಡುತ್ತಿರುವ ಇಂಥ ಕಂಪನಿಗಳ ಮೇಲೆ ನಾವು ಈ ರೀತಿ ದಂಡ ಹಾಕುತ್ತೇವೆಂದು ಹೇಳಿದರೆ, ಇದನ್ನು ಯಾರಾದರೂ ಎಂದಾದರೂ ಕ್ಷಮಿಸುವುದಕ್ಕೆ ಸಾಧ್ಯವಿದೆಯೇ? ಇನ್ನೊಂದು ಅಂಶ ಏನೆಂದರೆ, ಸತತವಾಗಿ 1992-93ರಿಂದ ಇದೇ ಕಂಪನಿಗೆ ಈ ರೀತಿ